## ಗಣೇಶನ ಜನತಾ ದರ್ಶನ

‘ಗಣೇಶನ ಜನತಾ ದರ್ಶನ’ (ನಾರಾಯಣ ರಾಯಚೂರು, ಸೆ. 1) ಮಂದಹಾಸ ಬಹಳ ಚೆನ್ನಾಗಿತ್ತು. ಪ್ರಚಲಿತ ವಿದ್ಯಮಾನಗಳ ಮೇಲೆ ಬರೆದ ಬರಹದಲ್ಲಿ ಶಾಲೆಗೆ ಹೋಗುವ ಮಗುವಿನಿಂದ ಹಿರಿಯ ನಾಗರಿಕರ ತನಕ ಗಣೇಶನ ಮುಂದೆ ಅವರ ಕಷ್ಟ ಹೇಳಿಕೊಂಡ ಬಗೆ ತೆಳು ಹಾಸ್ಯವಾಗಿ ಮೂಡಿಬಂದಿದೆ.

– ಮೇಘನಾ ರಘುನಂದನ್, ಹೂವಿನಹಡಗಲಿ




ಗಣೇಶನ ಜನತಾ ದರ್ಶನ ನಿರೂಪಣೆ ತುಂಬಾ ಸೊಗಸಾಗಿದೆ. ಎಲ್ಲಾ ವಯೋಮಿತಿಯವರ ಕಷ್ಟಗಳನ್ನು ಇಲ್ಲಿ ವಿವರಿಸಿದ್ದಾರೆ. ವರ್ತಮಾನಕ್ಕೆ ಹಿಡಿದ ಕನ್ನಡಿಯಾಗಿದೆ.

–ಶ್ರವಣ, ಬೆಂಗಳೂರು

ಮಂದಹಾಸ ತುಂಬ ರಂಜನೀಯವಾಗಿದ್ದು ಓದುಗರಲ್ಲಿ ಮಂದಹಾಸ ಮೂಡಿಸುವಲ್ಲಿ ಸಂಪೂರ್ಣ ಯಶಸ್ವಿ ಆಗಿದೆ. ಚಿತ್ರವೂ ಚೆನ್ನಾಗಿದೆ.

– ರಾಮಮೂರ್ತಿ ವಿ. ಎಸ್. ಬೆಂಗಳೂರು

## ಸಮುದ್ರ ಮಹಾಫಲ

‘ಮಾಪಾಳವೆಂಬ ಸಮುದ್ರ ಮಹಾಫಲ’ (ವಿನು ಗಂಗೆ, ಸೆ.1) ಲೇಖನ ಅದ್ಭುತ ವಿವರಣೆಯಿಂದ ಕೂಡಿದೆ. ಈ ಮಾಹಿತಿ ಬಹಳ ಜನರಿಗೆ ಗೊತ್ತಿರುವುದಿಲ್ಲ. ಈ ರೀತಿಯ ಲೇಖನಗಳನ್ನು ನಿರಂತರವಾಗಿ ಪ್ರಕಟಿಸಿ.

–ವೀಣಾ ಆರ್. ಬೆಂಗಳೂರು

## ...ಗಡ್ಡಕ್ಕೆ ಮಸಾಜ್

‘ಹುಲಿಯ ಬಾಲದಿಂದ ಗಡ್ಡಕ್ಕೆ ಮಸಾಜ್’ (ಆರ್ಕೆ ಆಡುಕಳ, ಸೆ. 1) ಲೇಖನ ಓದಿದೊಡನೆ ಮನಸ್ಸಿಗೆ ಸಂಕಟವಾಯಿತು. ಕಾಡಿನಲ್ಲಿ ರಾಜಗಾಂಭೀರ್ಯದಿಂದ ವಿಹರಿಸುತ್ತಿದ್ದ ಹುಲಿಯನ್ನು ನಾಯಿಯಂತೆ ಸಾಕುಪ್ರಾಣಿ ಮಾಡಿರುವ ಮನುಷ್ಯನ ದುರಾಸೆಗೆ ಎಣೆಯುಂಟೇ? ನಮ್ಮ ಇಂತಹ ಕೆಲಸಗಳಿಂದ ಇತರೆ ಜೀವಿಗಳ ಗೌರವ ಕಸಿಯುವ ವ್ಯಾಪಾರ ಹೆಚ್ಚುತ್ತದೆ.

–ಎಸ್. ಶಿಶುಪಾಲ, ದಾವಣಗೆರೆ



## ಮೆಗಲಾನ್ ಮಹಾಯಾನ




‘ಮೆಗಲಾನ್ ಮಹಾಯಾನ’ (ಡಾ. ಬಿ.ಆರ್. ಗುರುಪ್ರಸಾದ್, ಸೆ. 1) ಮುಖಪುಟ ಲೇಖನವನ್ನು ಒಂದೇ ಉಸಿರಿಗೆ ಓದಿಬಿಟ್ಟೆ. ಇದು ಮಹಾಯಾನ ಅಲ್ಲ; ಸಾಹಸಯಾನ. ಅದರಲ್ಲಿಯೂ ಇದೆಲ್ಲವನ್ನು ಬರೆದಿಟ್ಟ ‘ಫಿಗಫೆಟ್ಟಾನ ಪಾತ್ರ’ ನಿಜಕ್ಕೂ ಅಮೋಘ.

–ಖಂಡಪರಶು, ಮಾಗಡಿ

ಮೆಗಲಾನ್ ಮಹಾಯಾನ, ಲೇಖನ ಓದಿ ಮೈ ಜುಮ್ಮೆಂದಿತು. ಐನೂರು ವರ್ಷಗಳ ಹಿಂದಿನ ವಿಶ್ವಪರ್ಯಟನೆ ಸಾಹಸ ಯಾತ್ರೆಯಲ್ಲಿ ಮೆಗಲಾನ್ ಕಳೆದುಕೊಂಡದ್ದೆಷ್ಟು, ಗಳಿಸಿದ್ದೆಷ್ಟು ಎಂದು ಲೆಕ್ಕಹಾಕುವ ಬದಲು ಮನುಷ್ಯ ತನ್ನ ಗುರಿ ಸಾಧಿಸಲು ಏನೆಲ್ಲ ಸಂಕಷ್ಟಗಳನ್ನು ಎದುರಿಸಬಲ್ಲ ಎಂಬುದನ್ನು ಲೇಖನ ರೋಚಕವಾಗಿ ಪರಿಚಯಮಾಡಿಕೊಡುತ್ತದೆ. ಹೊರಟಿದ್ದು 1519ರಲ್ಲಿ, ಮರಳಿದ್ದು 1522ರಲ್ಲಿ. 207 ಮಂದಿ ನಾವಿಕರಲ್ಲಿ ಬದುಕುಳಿದವರು 18 ಮಾತ್ರ. ಈ ಎರಡು ಸಂಗತಿಗಳ ನಡುವೆ ಮೆಗಲಾನ್ ಮತ್ತು ಅವನ ತಂಡ ಇತಿಹಾಸದಲ್ಲಿ ಮರೆಯದಂಥ ಅವೆಷ್ಟು ಸಾಧನೆಗಳನ್ನು ಮಾಡಿತು!

ಶಾಲಾ ದಿನಗಳಲ್ಲಿ ಚರಿತ್ರೆಯಲ್ಲೋ, ಭೂಗೋಳದಲ್ಲೋ ಮೆಗಲಾನ್‌ನ ಸಾಹಸದ ಕೆಲವೇ ಸಂಗತಿಗಳಷ್ಟೇ ಪಠ್ಯಗಳಲ್ಲಿ ಓದುತ್ತಿದ್ದೆವು. ಜಗತ್ತನ್ನು ಸುತ್ತಿದ ಮೊದಲಿಗ ಮೆಗಲಾನ್ ಸಂಧಿ ಇಂಥವು. ಇದರ ಹೊರತು ಮೆಗಲಾನ್‌ನ ಸಾಹಸಯಾತ್ರೆಯ ಎಲ್ಲ ಮಗ್ಗುಲೂ ಪರಿಚಯವಿರುವುದಿಲ್ಲ. ಮಾರ್ಗ ಮಧ್ಯೆ ಆದ ತಲೆದಂಡಗಳು, ಎದುರಿಸಿದ ಶತ್ರುಗಳು, ಕೊನೆಗೆ ತನ್ನ ತಲೆಯೇ ದಂಡವಾದದ್ದು ಎಂಥ ಘೋರ ಸತ್ಯ. ಲೇಖಕರು ಸ್ವತಃ ವಿಜ್ಞಾನಿಯಾದ್ದರಿಂದ ಅಂದಿನ ಮತ್ತು ಇಂದಿನ ವೈಜ್ಞಾನಿಕ ಪ್ರಗತಿಯನ್ನು ತಾಳೆಹಾಕುತ್ತ ಹೋಗುವುದು ಕೂಡ ಓದುಗರಿಗೆ ವಿಶ್ಲೇಷಣಾತ್ಮಕ ನೋಟವನ್ನು ಲೇಖನ ಒದಗಿಸುತ್ತದೆ.

ಒಂದೆಡೆ ಲೇಖನದಲ್ಲಿ ಎಡ್ಮಂಡ್ ಹಿಲರಿ ಅವರ ಒಂದು ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಅವರನ್ನು ಒಬ್ಬ ಮಾಧ್ಯಮದ ಪ್ರತಿನಿಧಿ, ‘ನೀವು ಎವರೆಸ್ಟ್ ಅನ್ನು ಏರುವ ಸಾಹಸ ಕೈಗೊಂಡಿದ್ದೇಕೆ? ಎಂದು ಕೇಳಿದಾಗ ಅವರು, ಅದು ಇದೆಯಲ್ಲವೇ, ಆ ಕಾರಣದಿಂದ’ ಎಂದು ಉತ್ತರಿಸಿದರಂತೆ ಎಂಬ ಉಲ್ಲೇಖವಿದೆ. ವಾಸ್ತವವಾಗಿ ಇದು ಎಡ್ಮಂಡ್ ಹಿಲರಿಯ ಉತ್ತರವಲ್ಲ. 1923ರಲ್ಲಿ ಮಲ್ಲೋರಿ, ಟೈಮ್ಸ್ ಪತ್ರಿಕೆಗೆ ಸಂದರ್ಶನ ನೀಡುವಾಗ ಹೇಳಿದ ಮಾತುಗಳು.

ಮರೆತೇ ಹೋಗಿದ್ದ ಇತಿಹಾಸದ ಮಹಾಪುಟವೊಂದನ್ನು ಮತ್ತೆ ನಮ್ಮ ಕಣ್ಣಮುಂದೆ ನಿಲ್ಲಿಸಿದ ಸುಧಾ ಮತ್ತು ಲೇಖಕ ಗುರುಪ್ರಸಾದ್ ಅವರಿಗೆ ಮೆಚ್ಚುಗೆ ಸಲ್ಲುತ್ತದೆ. ವಾಸ್ತವವಾಗಿ ಇಂಥ ಲೇಖನಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಬೇಕು. ಈಗಿನ ಪೀಳಿಗೆಗೆ ಹಿಂದಿನವರು ಮಾಡಿದ ಸಾಹಸದ ಒಂದು ತುಣುಕಾದರೂ ನೆನಪಿನಲ್ಲಿ ಉಳಿಯುತ್ತದೆ.

–ಟಿ.ಆರ್. ಅನಂತರಾಮು, ಬೆಂಗಳೂರು

## ಕಾಲ್ಗೆಟಕುವ ಜಲಪಾತ

‘ನೀರಿನಾಟಕ್ಕೆ ನಿಪ್ಲಿ’ (ಸೆ. 1, ಹ.ಸ. ಬ್ಯಾಕೋಡ) ಜಲಪಾತದ ಕುರಿತ ಲೇಖನ ಸೊಗಸಾಗಿದೆ. ಅನೇಕ ಜಲಪಾತಗಳು ಅರಣ್ಯಗಳ ಮಧ್ಯಭಾಗದಲ್ಲಿದ್ದು ಕಿಲೋಮೀಟರ್‌ಗಟ್ಟಲೆ ನಡೆದು ತಲುಪುವಂತಿರುತ್ತವೆ. ಅಂಥಲ್ಲಿಗೆ ಹೋಗುವುದು ಸುಲಭವಲ್ಲ. ಅನೇಕರು ಚಿತ್ರ ಅಥವಾ ವಿಡಿಯೊ ನೋಡಿಯೇ ಸಂತೃಪ್ತರಾಗಬೇಕಾಗುತ್ತದೆ. ಆದರೆ, ನಿಪ್ಲಿ ಹಾಗಲ್ಲ. ಮನದಣಿಯೆ ನೀರಿನಲ್ಲಿ ಆಟವಾಡಬಹುದು. ಇಂತಹ ಜಲಪಾತಗಳ ಕುರಿತು ಲೇಖನಗಳು ಪ್ರಕಟವಾಗುತ್ತಾ ಬಂದಲ್ಲಿ ಆಸಕ್ತಿ ಇರುವವರಿಗೆ ಅನುಕೂಲ.

– ಪತ್ತಂಗಿ ಎಸ್. ಮುರಳಿ ಬೆಂಗಳೂರು

## ಸುಲಭ ದಾರಿ ಇದೆ...

ಜಲಪಾತ ತಲುಪಲು ಲೇಖಕರು ಹೇಳಿರುವುದಕ್ಕಿಂತಲೂ ಸುಲಭದ ದಾರಿ ಇದೆ. ಹುಬ್ಬಳ್ಳಿ–ಶಿರಸಿ ಕಡೆಯಿಂದ ನಿಪ್ಲಿಗೆ ತಲುಪಲು ದಾರಿ ಮಧ್ಯದಲ್ಲಿ ಹಲಗೇರಿ ಎಂಬ ಊರು ಸಿಗುತ್ತದೆ. ಅಲ್ಲಿಂದ ಎಡಕ್ಕೆ ಸಾಗಿದರೆ ಕೇವಲ 2 ಕಿ.ಮೀ. ನಲ್ಲಿ ನಿಪ್ಲಿ ತಲುಪಬಹುದು. ಮಾವಿನಗುಂಡಿ ಮೂಲಕ ಹೋಗುವ ಅವಶ್ಯಕತೆ ಇಲ್ಲ.

–ಮಂಜುನಾಥ್ ಹೆಗ್ಡೆ, ಬೆಡ್ಕನಿ

## ಎಳೆಯರ ಕಥೆ ಮೆಚ್ಚುಗೆಯಾಯಿತು

‘ಎಳೆಯರ ಅಂಗಳ’ ದಲ್ಲಿ (ಸೆ.1 ಸಂಚಿಕೆ) ‘ಗುಳುಂ ಸ್ವಾಹಾ’ ಕಥೆಗೆ ಸಂಬಂಧಿಸಿದಂತೆ ಲೇಖಕರ ಕಲ್ಪನೆ ಮತ್ತು ಮಕ್ಕಳ ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ರೀತಿ ಮೆಚ್ಚುಗೆಯಾಯಿತು.

–ಅ.ನ. ಅನಂತ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in